# ಗ್ಲಾಮರ್ ಅಷ್ಟೇ ನಟನೆಯಲ್ಲ

## ಸುಪ್ರಿಯಾ: ಕಲರ್ಸ್ ಕನ್ನಡದ 'ಮಗಳು ಜಾನಕಿ'ಯ ಸಂಜನಾ

◆ **ವೃತ್ತಿ ಬದಲಾವಣೆ ಹೇಗೆನಿಸುತ್ತದೆ?**

ಬದಲಾವಣೆ ಆಗಬೇಕಿತ್ತು ಆಯಿತು. ರಂಗಭೂಮಿಯ ಕಲಿಕೆ ಹೇಗಾಯಿತೆಂದರೆ, ಅಪ್ಪ ಸುರೇಶ್ ಎಸ್.ಎನ್. ಮೈಸೂರು ಪೇಪರ್ ಮಿಲ್‌ನಲ್ಲಿ (ಎಂಪಿಎಂ) ಕೆಲಸ ಮಾಡುತ್ತಿದ್ದರು. ಅವರು ಲಲಿತ ಕಲಾ ಸಂಘದ ಕಲಾವಿದರು. ನಾಟಕದ ತಾಲೀಮು ಇದ್ದಾಗ ನನ್ನನ್ನು ಕರೆದುಕೊಂಡು ಹೋಗುತ್ತಿದ್ದರು. ನನ್ನ ಅಮ್ಮ ಸೀತಾಲಕ್ಷ್ಮಿ ಅವರು ಸುಗಮ ಸಂಗೀತ ಕಲಾವಿದೆ. ನಾನು ಎಂಟು ವರ್ಷದವಳಿದ್ದಾಗ ತಂದೆ ಅಕಾಲಿಕ ಸಾವನ್ನಪ್ಪಿದರು. ಆ ನಂತರ ರಂಗ ಚಟುವಟಿಕೆ ಶಾಲಾ– ಕಾಲೇಜಿನ ವಾರ್ಷಿಕೋತ್ಸವಕ್ಕೆ ಸೀಮಿತವಾಯಿತು. ಸಂಗೀತ ಅಭ್ಯಾಸವನ್ನು ಮಾತ್ರ ಮುಂದುವರಿಸಿದೆ. ಶಿಕ್ಷಣ ಮುಗಿಸಿ ಅಧ್ಯಾಪಕಿ ಆದ ನಂತರ ರೇಣುಕಪ್ಪ ಎಂಬ ರಂಗ ಗುರುಗಳು ಮಕ್ಕಳ ನಾಟಕದಲ್ಲಿ ಅವಕಾಶ ನೀಡಿದರು.

ತರುವಾಯ 'ಗಿರಿಜಾ ಕಲ್ಯಾಣ' ಮತ್ತು 'ಕಿತ್ತೂರ ರಂಜನಿ' ನಾಯಕಿಯ ಪಾತ್ರಮಾಡಿದೆ. ರಂಗದಲ್ಲಿ ಬೆಳಕಿನ ವ್ಯವಸ್ಥೆಯೊಂದನ್ನು ಬಿಟ್ಟು ಎಲ್ಲ ರೀತಿಯಿಂದಲೂ ಕೆಲಸ ಮಾಡಿದ್ದೇನೆ. ನನ್ನ ಕಲಾ ಜೀವನದಲ್ಲಿ ಬಹುಮುಖ್ಯ ಪಾತ್ರವನ್ನು ನಿರ್ವಹಿಸಿದವರು ಸಾಸ್ವೇಹಳ್ಳಿ ಸತೀಶ್. ಒಂದು ರೀತಿಯಲ್ಲಿ ಮಾನಸ ಪಿತೃ ಇದ್ದಂತೆ. ಅವರ 'ಹೊಂಗಿರಣ' ತಂಡದ ಸದಸ್ಯೆಯಾದೆ. ಅವರು 'ಮೈಥಿಲಿ' ಎಂಬ 120 ನಿಮಿಷಗಳ ಏಕವ್ಯಕ್ತಿ ನಾಟಕವನ್ನು ಮಾಡಿಸಿದರು. ರಾಜ್ಯ ಹೊರರಾಜ್ಯಗಳಲ್ಲಿ 120 ಶೋಗಳನ್ನು ನೀಡಿದ್ದೇನೆ. ಅದು ನನ್ನ ವೃತ್ತಿ ಬದುಕಿನ ಪಲ್ಲಟಕ್ಕೆ ಭೂಮಿಕೆಯನ್ನು ಹಾಕಿತು. ಎಚ್.ಎಸ್. ವೆಂಕಟೇಶ್ ಮೂರ್ತಿ ಅವರ 'ಹಸಿರು ರಿಬ್ಬನ್' ಸಿನಿಮಾಕ್ಕೆ ನಾಯಕಿಯಾದೆ. ಅದರ ಬೆನ್ನಲ್ಲೇ 'ಅಮೃತವಾಹಿನಿ' 'ವ್ಯಾಪ್ತಿ ಪ್ರದೇಶದಿಂದ ಹೊರಗಿದ್ದಾರೆ' 'ಲಚ್ಚಿ' ಸಿನಿಮಾಗಳಲ್ಲಿ ನಟಿಸಿದೆ. ಆಗ ನಾನು ಕಲಾತ್ಮಕ ಸಿನಿಮಾಕ್ಕೆ ಸೀಮಿತ ಆಗಬಹುದು ಎಂದುಕೊಂಡಿದ್ದೆ. ಅಲ್ಲದೆ 'ಮಾತೃಜನನ' ಡಾಕ್ಯುಮೆಂಟರಿ ಮಾಡಿದ್ದೆ.



◆ **ಧಾರಾವಾಹಿ ಪಯಣ ಆರಂಭವಾಗಿದ್ದು ಹೇಗೆ?**

ನಿಜಕ್ಕೂ ಧಾರಾವಾಹಿಯಲ್ಲಿ ತೊಡಗಲು ನನಗೆ ಆಶೆ ಇತ್ತು. ಅವಕಾಶ ಇರಲಿಲ್ಲ. ಪರಿಚಿತ ಗೋಪಿ ಅಂಕಲ್ ಒತ್ತಾಯಕ್ಕೆ 'ಮಗಳು ಜಾನಕಿ'ಗೆ ಆಡಿಷನ್ ಕೊಟ್ಟಿದ್ದೆ. ಬೆಂಗಳೂರಿನ ಚಿತ್ರೀಕರಣಕ್ಕೆ ನನ್ನನ್ನು ಕರೆಸಿ ಮಾಡುವುದು ಕಷ್ಟ ಎನ್ನುವುದು ನನ್ನ ಅರಿವಿಗೆ ಬಂತು ಆ ಬಗ್ಗೆ ಯೋಚನೆಯನ್ನೂ ಮಾಡಲಿಲ್ಲ. ಅಷ್ಟರಲ್ಲಿ 'ಪ್ರಜಾವಾಣಿ'ಯಲ್ಲಿ ನನ್ನ ಬಗ್ಗೆ ಒಂದು ಲೇಖನ ಬಂದಿತ್ತು ಅದನ್ನು ನೋಡಿಯೇ ನಿರ್ಮಾಪಕ ಗುರುಪ್ರಸಾದ್ ಕರೆದರು. ಆಗ ಪಾತ್ರದ ಬಗ್ಗೆ ಏನನ್ನೂ ಕೇಳಲಿಲ್ಲ. ಸೀತಾರಾಂ ಅವರ ಧಾರಾವಾಹಿಯಲ್ಲಿ ಅವಕಾಶ ಸಿಗುವುದೇ ದೊಡ್ಡದೆಂದು ಒಪ್ಪಿದೆ. 'ಮಗಳು ಜಾನಕಿ' ಒಳ್ಳೆಯ ಅವಕಾಶ ಎಂದು ಒಪ್ಪಿ ಬಂದಿದ್ದೇನೆ.

◆ **ಹೊಸ ಪ್ರಯೋಗದ ಆಲೋಚನೆ ಇವೆಯಾ?**

ನಿರ್ಮಾಣ ಮಾಡಲು ಸಿದ್ಧ, ಅದಕ್ಕೆ ಹಣಕಾಸಿನ ಬೆಂಬಲ ಇಲ್ಲ. ಸಿಕ್ಕರೆ ಮಾಡುತ್ತೇನೆ. ನಿರ್ದೇಶಕಿ ಕೂಡ ಆಗಬೇಕು ಎಂದುಕೊಂಡಿದ್ದೇನೆ. ನನ್ನ ಹಿತೈಷಿಗಳೂ ಆ ಮಾತನ್ನು ಹೇಳುತ್ತಾರೆ. ನಿರ್ದೇಶನ ಮತ್ತು ನಿರ್ಮಾಣದಲ್ಲಿ ಮಹಿಳೆಯರ ಪ್ರಮಾಣ ಕಡಿಮೆ ಇದೆ. ನಿಜಕ್ಕೂ ಇದರಲ್ಲಿ ಪ್ರವೇಶಿಸಬೇಕು. ನನ್ನ ಸಾಹಿತ್ಯದ ಜ್ಞಾನವನ್ನು ಅಲ್ಲಿ ಬಳಸಬೇಕು. ಕೆಲವು ಧಾರಾವಾಹಿಗಳಲ್ಲಿ 'ಅ' ಕಾರ 'ಹ' ಕಾರ ಗೊತ್ತಿಲ್ಲದ ನಟ–ನಟಿಯರನ್ನು ನಾವು ಕಾಣುತ್ತೇವೆ. ಗ್ಲಾಮರ್ ಪಾಯಿಂಟ್ ಒಂದೇ ನಟನೆಗೆ ಬಂಡವಾಳ ಅಲ್ಲ. ಅದೆಲ್ಲವನ್ನೂ ಮೀರಿ ಸಿನಿಮಾ ಮಾಡುವುದು ನನ್ನ ಬಯಕೆ.

◆ **ಓಡಾಟ ನಟನೆ ರಂಗಭೂಮಿ... ಎಲ್ಲವನ್ನೂ ಹೇಗೆ ನಿಭಾಯಿಸುತ್ತೀರಿ?**

ಸದಾ ಬಿಝಿಯಾಗಿ ಇರಬೇಕು ಎಂದುಕೊಂಡಿದ್ದೇನೆ. ಶಿವಮೊಗ್ಗದಲ್ಲಿ ಒಂದು ನಾಟಕಕ್ಕೆ ತೆಗೆದುಕೊಂಡಿದ್ದಾರೆ. ನಾನು ಬೆಂಗಳೂರಿನಲ್ಲಿ ಇದ್ದರೂ ಸ್ಕ್ರಿಪ್ಟ್ ತರಿಸಿಕೊಂಡು ಪಕ್ಕಾ ಆಗಿ ತಾಲೀಮಿಗೆ ಹೋಗುತ್ತೇನೆ. ಈಗ ಬೆಂಗಳೂರು– ಶಿವಮೊಗ್ಗದ ಉಭಯವಾಸಿಯಾಗಿದ್ದೇನೆ. ಇವತ್ತು ಶೂಟಿಂಗ್ ಮುಗೀತು ಎಂದರೆ ರಾತ್ರಿ ನಮ್ಮೂರು. ನಾಳೆ ಶೂಟಿಂಗ್ ಇದೆ ಎಂದರೆ ಬೆಂಗಳೂರು ಓಡಾಟ ಇದ್ದೇ ಇರುತ್ತೆ.

ನಮ್ಮ ಮನೆಯಲ್ಲಿ ನಾನೇ ದೊಡ್ಡವಳು ನನ್ನ ತಂಗಿಯರಿಬ್ಬರು ಕೆಲಸ ಮಾಡುತ್ತಿದ್ದಾರೆ. ಬಿಡುವು ಸಿಕ್ಕರೆ ಅಮ್ಮನ ಜೊತೆ ಇರುತ್ತೇನೆ. ನಾನು ಅಮ್ಮನ ಬಿಟ್ಟು ಎಂದೂ ಇದ್ದವಳಲ್ಲ. ಕಳೆದ ಆರು ತಿಂಗಳಿಂದ ಬೆಂಗಳೂರಿಗೆ ಬಂದಿದ್ದೇನೆ. ಅಮ್ಮನಿಗೆ ಫೋನ್ ಕೂಡ ಫ್ರೀ ಇದ್ದಾಗ ಮಾಡುತ್ತೇನೆ. ನನಗಾಗಿ ಸಮಯವನ್ನು ವಿನಿಯೋಗಿಸಲು ಆಗುತ್ತಿಲ್ಲ. ಮೊದಲು ಹಾಡುತ್ತಿದ್ದೆ ಈಗ ಆಗುತ್ತಿಲ್ಲ. ವಾಕಿಂಗ್ ಕೂಡ ಮಾಡಲು ಆಗುತ್ತಿಲ್ಲ ಎನ್ನುವುದು ಬೇಸರ ಅನ್ನಿಸುತ್ತೆ.

◆ **ಪಾತ್ರದ ಬಗ್ಗೆ ಹೇಳುವುದಾದರೆ..**

ಆರಂಭದಲ್ಲಿ ಸಂಜನಾ ಪಾತ್ರ ತೇಲಿಸುವ ತರ ಇದೆ ಅನ್ನಿಸಿತ್ತು. ಕೆಲ ದಿನಗಳ ನಂತರ ಅದಕ್ಕೊಂದು ತೂಕ ಬಂತು. ದುಡುಕಿನ ಸ್ವಭಾವದ ಆಕೆಯ ಮಾತಿನಲ್ಲೂ ಒಳ್ಳೆಯ ಆಲೋಚನೆಯಿದೆ. ಶಿಕ್ಷಕಿ ಆದರೂ ಜವಾಬ್ದಾರಿ ಇಲ್ಲದಂತಿದ್ದಾಳೆ ಅನ್ನಿಸಿದರೂ ತಕ್ಷಣ ಆಕೆ ಘನತೆಯಿಂದ ನಡೆದುಕೊಳ್ಳುತ್ತಾಳೆ. ಆರಂಭದಲ್ಲಿ ಪಾತ್ರಕ್ಕೆ ಬೈದಾಗ ನಾನೇನೋ ತಪ್ಪು ಮಾಡಿದ್ನಾ ಅನ್ನಿಸುತ್ತಿತ್ತು. ಜನ ಸ್ವೀಕರಿಸಿದ್ದಾರೆ ಪಾತ್ರದ ಬಗ್ಗೆ ಒಳ್ಳೆಯ ಮಾತು ಕೇಳಿದ್ದೇನೆ. ಮುಂದೆ ನೆಗೆಟಿವ್ ಪಾತ್ರವನ್ನು ಮಾಡಬೇಕು. ಮಾಡಲು ಅಸಾಧ್ಯ ಎನ್ನುವ ಪಾತ್ರವನ್ನು ಮಾಡಬೇಕು ಅಂದುಕೊಂಡಿದ್ದೇನೆ. ಒಬ್ಬ ನಟಿಗೆ ಆಶೆ ಇದ್ದರೆ ಬೆಳೆಯಲು ಸಾಧ್ಯ. ಇದೇ ಪಾತ್ರವೇ ಆಗಬೇಕು ಅಂತಿಲ್ಲ. ನನಗೆ ಮೂಲ ಪ್ರೇರಣೆ ರಾಜ್‌ಕುಮಾರ್. ಅವರನ್ನು ಮಾದರಿಯಾಗಿ ಇಟ್ಟುಕೊಂಡು ಬೆಳೆಯಬೇಕು ಎನ್ನುವ ಆಶೆ ಇದೆ.

■ **ರಾಘವೇಂದ್ರ ಕೆ.**